# ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ.ಎಚ್.ರಸ್ತೆ, ತುಮಕೂರು - 572 103

ದಿನಾಂಕ:14.08.2026

ಸಂಖ್ಯೆ:ತುವಿ:ಶೈವಿ:2026-27: 1781

## ಪರಿಷ್ಕೃತಅಧಿಸೂಚನೆ:

ವಿಷಯ:- ವಿವಿಧ ಸ್ನಾತಕ ಪದವಿ ಪಠ್ಯಕ್ರಮದಲ್ಲಿ ಪರಿಸರ ಅಧ್ಯಯನ ಪತ್ರಿಕೆಯನ್ನು ಅಳವಡಿಸಕೊಂಡು ಬೋಧಿಸುವ ಕುರಿತು.

ಉಲ್ಲೇಖ:-1. ವಿವಿ ಅಧಿಸೂಚನೆ ಸಂಖ್ಯೆ: ತು.ವಿ.ಶೈ.ವಿ:2026-27/ 396 ದಿನಾಂಕ:30.04.2026.

2. ವಿವಿ ಪರಿಷ್ಕೃತ ಅಧಿಸೂಚನೆ ಸಂಖ್ಯೆ: ತು.ವಿ.ಶೈ.ವಿ:2026-27/ 1390 ದಿನಾಂಕ:21.07.2026.
3. ಸಂಯೋಜಕರು ಸ್ನಾತಕೋತ್ತರ ಪರಿಸರ ವಿಜ್ಞಾನ ಅಧ್ಯಯನ ಮತ್ತು ಸಂಶೋಧನಾ ವಿಭಾಗ ತುವಿತು ಇವರ ಪತ್ರ ದಿನಾಂಕ:30.07.2026.
4. ಅತಿಥಿ ಉಪನ್ಯಾಸಕರ ಮನವಿ ಪತ್ರ ದಿನಾಂಕ:31.07.2026.
3. ಮಾನ್ಯ ಕುಲಪತಿಗಳ ಅನುಮೋದನೆ ದಿ:12.08.2026

*****

ಮೇಲ್ಕಂಡ ವಿಷಯಕ್ಕೆ ಸಂಬಂದಿಸಿದಂತೆ, ತುಮಕೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಗೊಳಪಡುವ ಘಟಕ ಕಾಲೇಜುಗಳು ಮತ್ತು ಸಂಯೋಜಿತ ಕಾಲೇಜುಗಳಲ್ಲಿ 2026–27ನೇ ಶೈಕ್ಷಣಿಕ ಸಾಲಿನ ಹಾಗೂ ನಂತರದ ಶೈಕ್ಷಣಿಕ ಸಾಲುಗಳಿಗೆ ವಿವಿಧ ಸ್ನಾತಕ ಪದವಿಗಳಿಗೆ ಪ್ರವೇಶ ಪಡೆಯುವ ವಿದ್ಯಾರ್ಥಿಗಳಿಗೆ ಪ್ರೋಗ್ರಾಂ ವಿನ್ಯಾಸವನ್ನು (Programme Structure) ಸಿದ್ದಪಡಿ ಉಲ್ಲೇಖ (01)ರಲ್ಲಿ ಅಧಿಸೂಚಿಸಲಾಗಿತ್ತು. ಉಲ್ಲೇಖ(02)ರಲ್ಲಿ Constitutional Values-I ಮತ್ತು Constitutional Values-II ಪತ್ರಿಕೆಗಳನ್ನು ಕ್ರಮವಾಗಿ 1 ಮತ್ತು 2ನೇ ಸೆಮಿಸ್ಟರ್‌ಗಳಲ್ಲಿ ಮತ್ತು ಪರಿಸರ ಅಧ್ಯಯನ (Envirnomental Studies) ಪತ್ರಿಕೆಯನ್ನು ನಾಲ್ಕನೇ ಸೆಮಿಸ್ಟರ್‌ಗೆ ಅಳವಡಿಸಿಕೊಂಡು ಬೋಧಿಸುವಂತೆ ಪರಿಷ್ಕೃತ ಅಧಿಸೂಚನೆ ಹೊರಡಿಸಲಾಗಿತ್ತು. ಉಲ್ಲೇಖ (03) ಮತ್ತು (04)ರ ಮನವಿಯ ಮೇರೆಗೆ ಹಾಗೂ ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ಪ್ರೋಗ್ರಾಂ ವಿನ್ಯಾಸದಲ್ಲಿ ಕ್ರೆಡಿಟ್ ಮತ್ತು ಬೋಧನಾವದಿಯಲ್ಲಿ ವ್ಯತ್ಯಾಸವಾಗದಂತೆ ಪರಿಸರ ಅಧ್ಯಯನ ಪತ್ರಿಕೆಯನ್ನು 2026–27ನೇ ಸಾಲಿನಿಂದ ಈ ಕೆಳಕಂಡ ಕೋಷ್ಟಕದಲ್ಲಿ ಸೂಚಿಸಿರುವಂತೆ ವಿವಿಧ ಸ್ನಾತಕ ಪದವಿಗಳಲ್ಲಿ ಪಠ್ಯಕ್ರಮವನ್ನು ಅಳವಡಿಸಿಕೊಂಡು ಬೋಧಿಸುವಂತೆ ಅಧಿಸೂಚಿಸಲಾಗಿದೆ.

| ಸೆಮಿಸ್ಟರ್‌ಗಳು | ಪತ್ರಿಕೆಗಳು | ಕೋರ್ಸುಗಳು |
|---|---|---|
| 3ನೇ ಸೆಮಿಸ್ಟರ್ | ಪರಿಸರ ಅಧ್ಯಯನ ಪತ್ರಿಕೆ | ಬಿ.ಎ, ಬಿ.ಎಸ್ಸಿ, ಬಿ.ಸಿ.ಎ, ಬಿ.ಎಸ್.ಡಬ್ಲ್ಯೂ |
| 4ನೇ ಸೆಮಿಸ್ಟರ್ | ಪರಿಸರ ಅಧ್ಯಯನ ಪತ್ರಿಕೆ | ಬಿ.ಕಾಂ, ಬಿ.ಬಿ.ಎ, ಬಿ.ವಿ.ಎ. ಬಿ.ಎಸ್ಸಿ (FAD), ಬಿ.ಎಸ್ಸಿ (F&IS). |

ಆದೇಶದ ಮೇರೆಗೆ,

ಉಪಕುಲಸಚಿವರು

ಉಪಕುಲಸಚಿವರು
ಶೈಕ್ಷಣಿಕ ವಿಭಾಗ
ತುಮಕೂರು ವಿಶ್ವವಿದ್ಯಾನಿಲಯ
ತುಮಕೂರು

ಇವರಿಗೆ,

1. ಪ್ರಾಂಶುಪಾಲರು, ಘಟಕ ಮತ್ತು ಸಂಯೋಜಿತ ಕಾಲೇಜುಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
2. ಸಿಸ್ಟಂ ಅನಾಲಿಸ್ಟ್, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು – ಎಲ್ಲಾ ಕಾಲೇಜುಗಳಿಗೆ ಅಧಿಸೂಚನೆಯನ್ನು ಇ-ಮೇಲ್ ಮುಖಾಂತರ ಕಳುಹಿಸುವುದು ಹಾಗೂ ಜಾಲತಾಣದಲ್ಲಿ ಪ್ರಕಟಿಸುವುದು.

ಪ್ರತಿಗಳು:

1. ಕುಲಸಚಿವರು (ಮೌಲ್ಯಮಾಪನ), ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು
2. ನಿರ್ದೇಶಕರು, ಕಾಲೇಜು ಅಭಿವೃದ್ದಿ ಪರಿಷತ್, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು
3. ಮಾನ್ಯ ಕುಲಪತಿಗಳ ಆಪ್ತ ಕಾರ್ಯದರ್ಶಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು
4. ಮಾನ್ಯ ಕುಲಸಚಿವರ ಆಪ್ತ ಸಹಾಯಕರು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು
5. ಕಚೇರಿ ಪ್ರತಿ.